- -

**ಓ.ಎಸ್. ಸಂಖ್ಯೆಃ 168/2016**

**ಪಿ.ಡಬ್ಲ್ಯೂಃ 4**

ದಿನಾಂಕಃ 22.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ನಂಬರ್ 1 ರಿಂದ 3 ರವರ ಪರ ಶ್ರೀಃ ಬಿ.ಆರ್.ಜಿ. ವಕೀಲರಿಂದ**

1. ಈ ದಾವೆಯನ್ನು ಯಾರು ಯಾರ ವಿರುದ್ಧ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿರುತ್ತದೆ. ವಾದಿಯ ದಾಖಲೆಗಳನ್ನು ನಾನು ನೋಡಿರುತ್ತೇನೆ. ಪ್ರತಿವಾದಿಯರ ತಂದೆ ಹೆಸರು ಹಳ್ಳಿ ಪಂಪನಗೌಡ ಎಂದು ಇರುತ್ತದೆ. 1 ನೇ ವಾದಿಯ ತಂದೆಯ ಹೆಸರು ದಾನನಗೌಡ ಎಂದು ಇರುತ್ತದೆ. ದಾವಾ ಆಸ್ತಿಗಳು ಮೂಲತಃ ದಾನನಗೌಡರವರಿಗೆ ಸೇರಿದ ಆಸ್ತಿಗಳು ಎಂದರೆ ಸರಿ. ದಿಃ13-03-1978 ರಲ್ಲಿ ದಾನನಗೌಡರವರು ದಾವಾ ಆಸ್ತಿಗಳನ್ನು ಹಳ್ಳಿ ಪಂಪನಗೌಡ ರವರಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು. ನೊಂದಾಯಿತ ಕ್ರಯ ಪತ್ರದ ಮೂಲಕ ದಾನನಗೌಡರವರು ದಾವಾ ಆಸ್ತಿಗಳ ಸ್ವಾಧೀನವನ್ನು ಪಂಪನಗೌಡರವರಿಗೆ ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ.

2. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಮೊದಲಿನ ಪಹಣಿ ಪತ್ರಿಕೆಗಳನು ದಾನನಗೌಡ ರವರ ಹೆಸರಿನಲ್ಲಿದದ್ದವು. ನಂತರ ಪಂಪನಗೌಡರವರ ಹೆಸರಿನಲ್ಲಿ ಇರುತ್ತವೆ. ಸುಮಾರು 20 ವರ್ಷಗಳಿಂದ ಪಹಣಿ ಪತ್ರಿಕೆಗಳು ಹಳ್ಳಿ ಪಂಪನಗೌಡ ರವರ ಹೆಸರಿನಲ್ಲಿ ಇರುತ್ತವೆ. ಕ್ರಯ ಪತ್ರದ ಆಧಾರದ ಮೇಲೆ ಹಕ್ಕು ಬದಲಾವಣೆ ಮಾಡಿಕೊಂಡಿರುವ ಕಾರಣ ಮತ್ತು ಕ್ರಯ ಪತ್ರದ ಅಡಿಯಲ್ಲಿ ಹಳ್ಳಿ ಪಂಪನಗೌಡ ಸ್ವಾಧೀನದಲ್ಲಿರುವ ಕಾರಣ ಪಹಣಿ ಪತ್ರಿಕೆಗಳಲ್ಲಿ ಹಳ್ಳಿ ಪಂಪನಗೌಡ ರವರ ಹೆಸರು ನಮೂದಾಗಿದೆ ಎಂಬ ವಿಚಾರ ನನಗೆ ಗೊತ್ತು ಎಂದರೆ ಸರಿ. ಪ್ರತಿವಾದಿಗಳ ತಂದೆಯಾಗಲಿ ಅಥವಾ ಪ್ರತಿವಾದಿಗಳಾಗಲಿ ದಾವಾ ಆಸ್ತಿಗಳ ಸ್ವಾಧೀನದಲ್ಲಿಲ್ಲ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನಂಬರ್ 1 ರವರು ನನಗೆ ಕುಲಸ್ಥರು.

3. ವಾದಿಗಳ ಮಾತು ಕೇಳಿ ನಾನು ನನ್ನ ಮುಖ್ಯ ವಿಚಾಣೆಯಲ್ಲಿ ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ.

**ಮರು-ವಿಚಾರಣೆ ಇಲ್ಲ.**

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ**